# ನೂಪುರ ನಾದ

ಹೆಜ್ಜೆ ಗೆಜ್ಜೆಗಳ ಮಹಾಸಂಗಮ
ಕಾಯಗಳೆರಡು ವಿರುದ್ಧ
ದಿಕ್ಕಿಗೆ ನಿಂತು
ನಾ ಬೇರೆ ನೀ ಬೇರೆ ಎಂದರೂ
ನಾವಿಬ್ಬರೊಂದೇ ಎಂದು
ಸಾರಿದಂತೆ ಭಾಸ

ಕಿರುಗಂಟೆಯ ಕಿಣಿಕಿಣಿ ನಾದಕೆ
ಸೋತು ನೃತ್ಯ ಮಾಡದವರುಂಟೆ
ತರಿಕಿಟ ಧಿಮಿಕಿಟ ತಾಳಕ್ಕೆ ತಕ್ಕಂತೆ
ಗೆಜ್ಜೆಯ ಸದ್ದಿಗೆ ಹೆಜ್ಜೆ
ಹಾಕದವರುಂಟೆ

ಮನದ ಎಲ್ಲಾ ದುಗುಡಗಳ
ಆಚೆ ನೂಕಿ ಕುಣಿಯಬೇಕು
ಹೀಗೆ ಬಣ್ಣದ ಗೆಜ್ಜೆ ಕಟ್ಟಿ
ಆಗಲೇ ಅಲ್ಲವೇ ನೃತ್ಯ ನೋಡುವ
ರಸಿಕರ ಕಣ್ಮನ ಸೆಳೆದು
ನೂಪುರ ನಾದದ ಹೊನಲು
ಹರಿದು ಬರುವುದಲ್ಲವೇ
ನೃತ್ಯವೆಂಬ ಹೃದಯದ ಗುಡಿ ತಟ್ಟಿ.

● **ರಂಜಿತಾ ಎಂ.**

# ಕಾಲಗೆಜ್ಜೆಗೆ ಸಜ್ಜು

ತಾಳಕ್ಕೆ ತಕ್ಕಂತೆ ಕುಣಿಯಬೇಕು
ಕಾಲಕ್ಕೆ ತಕ್ಕಂತೆ ಮಣಿಯಬೇಕು
ಇಲ್ಲಿ ಕೈ, ಕಾಲು ಮುಗಿದರಷ್ಟೆ!
ಕಾಲಗೆಜ್ಜೆಗೆ ಸಜ್ಜಾಗಲೇ ಬೇಕು!!
ಡೊಂಕಾಗಿದೆ ನೆಲ ಮಂಕಾಗಿದೆ ಮನ
ಮುನಿಸಿಕೊಂಡರಿಲ್ಲಿ ಜಾಗವಿಲ್ಲ
ನೋಡುವವರಿಲ್ಲವೆಂದು
ಸುಮ್ಮನೆ ನಿಲ್ಲುವುದಲ್ಲ.
ಕುರುಡು ಕಾಂಚಾಣಕೆ



ಮದದ ಮತ್ಸರಕೆ ಬೇಡದ ತಾತ್ಸರಕೆ
ಕುಣಿದಾಡಿದೆ ಜಗ ಈಗಾಗಲೇ.
ಹೇಳು ನೀ ಯಾವ
ಗೆಜ್ಜೆ ಕಟ್ಟಿ ಸಜ್ಜಾಗಿರುವೆ?
ಯಾವ ತಾಳಕೆ ನೀ ತಲೆ ಮರೆಸಿರುವೆ?
ಗೆಜ್ಜೆ ಕಟ್ಟಿದ ಮೇಲೆ ಕುಣಿಯುವುದು
ಅನಿವಾರ್ಯ ಕರ್ಮ ನಿನಗೆ.

● **ಉಮರ್ ದೇವರಮನಿ**

# ಚೂತವನ ಚೈತ್ರ

ಬೆಳ್ಳಿ ಗೆಜ್ಜೆಗೆ ಕಳ್ಳ ಹೆಜ್ಜೆಗೆ
ಒಳ್ಳೆ ಕುಣಿತದ ಹೆಣ್ಣಿಗೆ
ಒನಪು ಒಯ್ಯಾರ ಎನಿತು ಶೃಂಗಾರ
ಚಿನ್ನದ ಮಳೆಯು ಕಣ್ಣಿಗೆ

ಜೋಡಿ ಪಾದ ಕೂಡಿ ನಾದ
ಒಡನೆ ಹೊಮ್ಮಿದೆ ಪ್ರಮೋದ
ತಾಳ ಲಯ ಮೇಳ ಹೃದಯ
ಕೆಳೆಯ ಕಟ್ಟಿದೆ ತೋಷ

ಭೃಂಗದ ಬೆನ್ನೇರಿ
ಶೃಂಗಾರ ವಲ್ಲರಿ
ತಂಗುತಿದೆ ಹೃದಯ ಬಟ್ಟಲಲಿ
ಚೂತವನ ಚೈತ್ರ
ಮಧುಬನ ಪಾತ್ರ
ಮುದವ ನೀಡಿದೆ ಮೋದದಿ

● **ಯು.ಜೆ. ಕುಲಕರ್ಣಿ**